**OS: 34/2015**
**P.W-3**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ</u>**

ದಿನಾಂಕಃ 06.03.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು 1 ನೇ ಪ್ರತಿವಾದಿ ಪರ ವಕೀಲರಿಂದ</u>**

ಈ ದಾವೆಯನ್ನು ವಾದಿಗಳು ಪ್ರತಿವಾದಿಗಳ ವಿರುದ್ಧ ಹಾಕಿರುತ್ತಾರೆ. ದಾವಾ ಆಸ್ತಿಯು ನಮಗೆ ಸೇರಬೇಕು ಎಂಬುದಾಗಿ ಈ ದಾವೆ ಸಲ್ಲಿಸಿದ್ದಾರೆ. ದಾವಾ ಆಸ್ತಿಯ ಸರ್ವೆ ನಂಃ 512, ವಿಸ್ತೀರ್ಣ 1 ಎಕರೆ 15 ಸೆಂಟ್ಸ್ ಇರುತ್ತದೆ. ಅದರ ಚೆಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. ದಾವಾ ಆಸ್ತಿಯು ಮೂಲತಃ ನಮ್ಮ ತಂದೆ ಮಾಬುಸಾಬ್ ರವರಿಗೆ ಸೇರಿದ ಆಸ್ತಿಯಾಗಿದೆ. ಅವರು 1990 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ 3 ಜನ ಗಂಡು ಮಕ್ಕಳು ಅವರುಗಳೆಂದರೆ ಪೀರ ಮಾಬುಸಾಬ್, ಪೀರ ರಾಜಸಾಬ್, ಚಮನ್ ಸಾಬ್, 6 ಜನ ಹೆಣ್ಣು ಮಕ್ಕಳು ಅವರುಗಳೆಂದರೆ ಅಮೀನಬೇಗಂ, ಶರೀಫ್ ಬೇಗಂ, ನಮಿಜಾ ಬೇಗಂ, ಮಮತಾಜ್ ಬೇಗಂ, ರಶೀದ ಬೇಗಂ, ಫರೀದ ಬೇಗಂ ಇರುತ್ತೇವೆ. ನನ್ನ ತಂದೆ ಮೃತಪಟ್ಟ ನಂತರ ಅವರ ಮಕ್ಕಳ ಹೆಸರಿಗೆ ಹಕ್ಕು ಬಂದಲಾವಣೆ ಆಗಿದೆಯಾ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಕಾಲವಾದ ನಂತರ ಎಲ್ಲಾ ಮಕ್ಕಳಿಗೂ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರಿಗೆ ಯಾವಾಗ ಹಕ್ಕು ಬದಲಾವಣೆ ಆಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಕಾಲವಾದ ನಂತರ ನನ್ನ ತಾಯಿಯ ಹೆಸರಿಗೆ ಹಕ್ಕು ಬದಲಾವಣೆ ಆಗಲು ನನ್ನ ಸಹೋದರ, ಸಹೋದರಿಯರು ಒಪ್ಪಿಗೆ ಕೊಟ್ಟಿರುವುದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಒಪ್ಪಿಗೆ ಕೊಟ್ಟಿರುತ್ತೇನೆ.

ನನ್ನ ತಾಯಿಯು ಜರೀನ ಬೇಗಂ, ಜರೀನ ಬಾನು, ಶಬನಂ ರವರಿಗೆ ದಾನ ಪತ್ರ ಮಾಡಿಕೊಟ್ಟಿರುತ್ತಾರೆ. ಅವರಲ್ಲಿ ನನ್ನ ಹೆಂಡತಿ ಶಬನಂ. ಈ ಮೇಲೆ ಹೇಳಿದವರು ಮಾಬುಸಾಬ್ ರವರ ಸೊಸೆಯಂದಿರು ಇರುತ್ತಾರೆ. ದಿಃ 05.02.2009 ರಲ್ಲಿ ಸದರಿ ಪತ್ರ ಮಾಡಿಕೊಟ್ಟಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಮಾಡಿಕೊಟ್ಟಿರುತ್ತಾರೆ. ಸದರಿ ದಾಖಲೆಗೆ ನಾನು, ನನ್ನ ಇಬ್ಬರು ಸಹೋದರರು, ವಿರೂಪಾಕ್ಷಪ್ಪ ಎನ್ನುವವರು ಸಾಕ್ಷಿಯಾಗಿ ಸಹಿ ಮಾಡಿರುತ್ತೇವೆ.

ನನ್ನ ತಂದೆ 1 ನೇ ಪ್ರತಿವಾದಿಯಿಂದ ಸಾಲ ಪಡೆದಿದ್ದರು ಆ ಸಾಲವನ್ನು ಮರುಪಾವತಿಸದೆ ಇದ್ದ ಕಾರಣಕ್ಕೆ 1 ನೇ ಪ್ರತಿವಾದಿಯವರು ಸದರಿ ಆಸ್ತಿಯನ್ನು ಜಪ್ತುಪಡಿಸಿಕೊಂಡು ಸಾರ್ವಜನಿಕ ಹರಾಜಿನಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹರಾಜಿನಲ್ಲಿ 2 ನೇ

ಪ್ರತಿವಾದಿ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಖರೀದಿಸಿದ ನಂತರ ಸದರಿ ಆಸ್ತಿಯ ಮಾಲೀಕರಾಗಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ವಾದಿಯು ಈ ದಾವೆಯನ್ನು ಸರ್ವೆ ನಂಃ 512, 514, ವಿಸ್ತೀರ್ಣ 1 ಎಕರೆ 13 ಸೆಂಟ್ಸ್ ಗೆ ಸಲ್ಲಿಸಿದ್ದಾರೆ ಎಂದರೆ ಸರಿ. ನಿ.ಪಿ 3 ರಲ್ಲಿ ಸರ್ವೆ ನಂಃ 514 ನಮೂದಿಸಿಲ್ಲ ಎಂದರೆ ಸರಿ. ನಿ.ಪಿ 3 ರಲ್ಲಿ ವಿಸ್ತೀರ್ಣ 1 ಎಕರೆ 15 ಸೆಂಟ್ಸ್ ಇದೆ ಆದರೆ ದಾವಾ ಶೆಡ್ಯೂಲ್ ನಲ್ಲಿ ವಿಸ್ತೀರ್ಣ 1 ಎಕರೆ 13 ಸೆಂಟ್ಸ್ ಗೆ ದಾವೆ ಸಲ್ಲಿಸಲಾಗಿದೆ ಎಂದರೆ ಸರಿ. ನಾನು, ನನ್ನ ಅಣ್ಣ-ತಮ್ಮಂದಿರು ಮತ್ತು ನನ್ನ ತಾಯಿ ನನ್ನ ಹೆಡಂತಿ, ನನ್ನ ಸಹೋದರರ ಹೆಂಡತಿಯರು ಸೇರಿ ನಿ.ಪಿ 3 ನ್ನು ಸೃಷ್ಠಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಸಾರ್ವಜನಿಕ ಹರಾಜಿನಲ್ಲಿ 1ನೇ ಪ್ರತಿವಾದಿಯಿಂದ ಖರೀದಿಸಿರುವುದರಿಂದ ನನ್ನ ತಾಯಿಗೆ ದಾನ ಪತ್ರ ಬರೆಯುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ನನ್ನ ತಾಯಿಗೆ ದಾನ ಮಾಡುವ ಹಕ್ಕು ಇಲ್ಲದೆ ಇರುವ ಕಾರಣಕ್ಕಾಗಿ ಅವರ ಸೊಸೆಯಂದಿರಿಗೂ ಸಹ ಯಾವುದೇ ಹಕ್ಕು ವರ್ಗಾವಣೆ ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ಅಂಶಗಳು ಸುಳ್ಳು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿನಲ್ಲಿ ಕೇಳಲಾದ ಅಂಶಗಳನ್ನು ಪ್ರತಿವಾದಿ ನಂಃ 2-ಎ, ಡಿ ಮತ್ತು ಇ ರವರ ಪರ ವಕೀಲರು ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.)

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**